ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ:ದ:ನ್ಯಾ:ದಂ.,ರವರು, ಕಡೂರು
C.C. No.2867/2024.
ದಿನಾಂಕ:**20.12.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು

<u>ಮುಂದುವರೆದ ಪಾಟೀ ಸವಾಲು:</u>- ಶ್ರೀ ಸಿ ಓ ವೈ ವಕೀಲರಿಂದ:-

ನಾನು ಆದಾಯ ತೆರಿಗೆ ಪಾವತಿ ಮಾಡುತ್ತೇನೆ. ರೂ.8 ಲಕ್ಷ ಹಣ ನೀಡಿರುವ ಬಗ್ಗೆ ಆದಾಯ ತೆರಿಗೆ ರಿಟರ್ನ್ಸ್ ನಲ್ಲಿ ತೋರಿಸಿರುವುದಿಲ್ಲ. ವೈನ್ ಸ್ಟೋರಿಗೆ ಎಷ್ಟು ಹಣ ಬರುತ್ತದೆ ಎಂಬ ಬಗ್ಗೆ ನನಗೆ ಮಾಹಿತಿ ಇದೆ. ಆರೋಪಿಯ ಖಾತೆಯಿಂದ ನನ್ನ ಮಗ ಅಜಯ್ ಖಾತೆಗೆ ಮತ್ತು ನನ್ನ ವೈನ್ ಸ್ಟೋರಿನ ಬ್ಯಾಂಕ್ ಖಾತೆಗೆ ಎಷ್ಟು ಹಣ ಬಂದಿದೆ ಎಂದರೆ ಯಾವುದೇ ಹಣ ಬಂದಿರುವುದಿಲ್ಲ.

ದಿ:11.05.2023 ರಂದು ನನ್ನ ಮಗನ ಖಾತೆಗೆ ರೂ.25,000/- ಮತ್ತು ಇತರ ಬೇರೆ ಬೇರೆ ಸಂಖ್ಯೆಯ ಮೊತ್ತವನ್ನು ಈ ರೀತಿಯಾಗಿ ಒಟುಟ 25 ಅಥವಾ 26 ಬಾರಿ ಆರೋಪಿಯು ಜಮಾ ಮಾಡಿರುತ್ತಾರೆ ಎಂದರೆ ನನ್ನ ಮಗನ ಖಾತೆಗೆ ಕಳುಹಿಸಿರುವ ಬಗ್ಗೆ ನನಗೆ ಮಾಹಿತಿ ಇಲ್ಲ ಹಾಗೂ ನನಗೂ ಮತ್ತು ನನ್ನ ಮಗನ ವ್ಯವಹಾರಕ್ಕು ಸಂಬಂಧ ಇಲ್ಲ ಎಂದು ನುಡಿಯುತ್ತಾರೆ.

ದಿ:18.03.2024 ರಂದು ಆರೋಪಿಯ ಖಾತೆಯಿಂದ ರೂ.30,000/- ನನ್ನ ಮಗನ ಖಾತೆಗೆ ಜಮಾ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಈ ರೀತಿಯಾಗಿ ನನ್ನ ಮಗನ ಖಾತೆಗೆ ಆರೋಪಿಯ ಕಡೆಯಿಂದ ಒಟ್ಟು ರೂ.4,47,300/- ಹಣ ಯಾವ ಕಾರಣಕ್ಕೆ ಜಮಾ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ನನ್ನ ಮಗ ಮತ್ತು ನನ್ನ ವ್ಯವಹಾರ ಪ್ರತ್ಯೇಕವಾಗಿ ಇರುತ್ತದೆ. ನನ್ನ ಮಗ ಆಟೋಮೊಬೈಲ್ ವ್ಯವಹಾರ ಮತ್ತು ರಿಯಲ್ ಎಸ್ಟೇಟ್ ವ್ಯವಹಾರ ಸಹ ಮಾಡುತ್ತಾನೆ.

ನನ್ನ ವೈನ್ ಸ್ಟೋರಿನ ಬ್ಯಾಂಕ್ ಖಾತೆಯು ಕೊಟ್ಟಕ್ ಬ್ಯಾಂಕ್, ಕಡೂರು ಶಾಖೆ ಸಂಖ್ಯೆ 107011000980 ಆಗಿರುತ್ತದೆ. ಈ ಖಾತೆಗೆ ಆರೋಪಿಯಿಂದ ದಿ:06.09.2023 ರಂದು ನನ್ನ ವೈನ್ ಸ್ಟೋರಿಗೆ ರೂ.1,200, ದಿ:20.10.2023 ರಂದು ರೂ.3,500/-, ದಿ:23.10.2023 ರಂದು ದೇಸಾ ವೈನ್ಸ್ ಖಾತೆಗೆ ರೂ.8,000/- ಆರೋಪಿ ಖಾತೆಯಿಂದ

ಬಂದಿದೆ ಎಂದರೆ ನನಗೆ ಗೊತ್ತಿಲ್ಲ. ದಿಃ26.10.2023 ರಂದು ರೂ.13,000/- ಹಣ ಜಮಾ ಆಗಿದೆ ಎಂದರೆ ಸರಿಯಲ್ಲ. ಅದೇ ರೀತಿ ದಿಃ13.11.2023 ರಂದು ರೂ.18,000/- ಹಣ ಜಮಾ ಆಗಿದೆ ಎಂದರೆ ಸರಿಯಲ್ಲ. ದಿಃ10.11.2023 ರಂದು ಸಹಃ ರೂ.18,000/- ಹಣ ದೇಸಾ ವೈನ್ಸ್ ಖಾತೆಗೆ ಹಣ ಜಮಾ ಆಗಿದೆ ಎಂದರೆ ಸರಿಯಲ್ಲ. ಅದೇ ರೀತಿ ದಿಃ08.11.2023 ಕ್ಕೆ ರೂ.2,000/- ಜಮಾ ಆಗಿದೆ ಎಂದರೆ ಸರಿಯಲ್ಲ. ಅದೇ ರೀತಿ 16.11.2023 ರಂದು ರೂ.2,5000/- ಜಮಾ ಆಗಿದೆ ಎಂದರೆ ಸರಿಯಲ್ಲ. ದಿಃ13.12.2023 ರಂದು ರೂ.1,500/- ಜಮಾ ಆಗಿದೆ ಎಂದರೆ ಸರಿಯಲ್ಲ. ದಿಃ05.12.2023 ರಂದು ರೂ.4,500/- ಹಣ ಜಮಾ ಆಗಿದೆ ಎಂದರೆ ಸರಿಯಲ್ಲ. ದಿಃ03.12.2023 ರೂ.8,300/- ಹಣ ಜಮಾ ಆಗಿದೆ ಎಂದರೆ ಸರಿಯಲ್ಲ. ದಿಃ21.11.2023 ರಂದು ರೂ.16,580/- ಜಮಾ ಆಗಿದೆ ಎಂದರೆ ಸರಿಯಲ್ಲ. ದಿಃ19.11.2023 ರಂದು ರೂ.10,000/- ಹಣ ಜಮಾ ಆಗಿದೆ ಎಂದರೆ ಸರಿಯಲ್ಲ. ದಿಃ17.12.2023 ರಂದು ರೂ.6,000/- ಹಣ ಜಮಾ ಆಗಿದೆ ಎಂದರೆ ಸರಿಯಲ್ಲ. ದಿಃ20.12.2023 ರಂದು ರೂ.7,840/- ಹಣ ಜಮಾ ಆಗಿದೆ ಎಂದರೆ ಸರಿಯಲ್ಲ. ದಿಃ22.12.2023 ರಂದು ರೂ.8,350/- ಹಣ ಜಮಾ ಆಗಿದೆ ಎಂದರೆ ಸರಿಯಲ್ಲ. ದಿಃ23.12.2023 ರಂದು ರೂ.1,500/- ಹಣ ಜಮಾ ಆಗಿದೆ ಎಂದರೆ ಸರಿಯಲ್ಲ. ದಿಃ25.12.2023 ರಂದು ರೂ.5,000/- ಹಣ ಜಮಾ ಆಗಿದೆ ಎಂದರೆ ಸರಿಯಲ್ಲ. ದಿಃ01.01.2024 ರಂದು ರೂ.3,000/- ಹಣ ಜಮಾ ಆಗಿದೆ ಎಂದರೆ ಸರಿಯಲ್ಲ. ದಿಃ10.01.2024 ರಂದು ರೂ.7,650/- ಹಣ ಜಮಾ ಆಗಿದೆ ಎಂದರೆ ಸರಿಯಲ್ಲ. ದಿಃ11.02.2024 ರಂದು ರೂ.11,950/- ಹಣ ಜಮಾ ಆಗಿದೆ ಎಂದರೆ ಸರಿಯಲ್ಲ. ದಿಃ28.04.2024 ರಂದು ರೂ.38,000/- ಹಣ ಜಮಾ ಆಗಿದೆ ಎಂದರೆ ಸರಿಯಲ್ಲ. ಈ ರೀತಿಯಾಗಿ ಆರೋಪಿಯು ಆತನ ಫೋನ್ ಪೇ / ಪೇಟಿಎಂ ಮೂಲಕ ನನ್ನ ಮಗನ ಬ್ಯಾಂಕ್ ಖಾತೆಗೆ ಹಾಗೂ ನನ್ನ ದೇಸಾ ವೈನ್ಸ್ ಖಾತೆಗೆ ಜಮಾ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನು ಅಕೌಂಟ್ ನೋಡಿ ಹೇಳಬಹುದು ಎಂದು ನುಡಿಯುತ್ತಾರೆ.

ನಾನು ಅಡಿಟರ್ ಗೆ ಹಣದ ವ್ಯವಹಾರದ ಎಲ್ಲಾ ಸ್ಟೇಟ್ ಮೆಂಟ್ ಗಳನ್ನು ನೀಡುತ್ತೇನೆ ಎಂದರೆ ಸರಿ. ನಾನು 2023 ರಿಂದ ಈ ವರೆಗಿನ ನನ್ನ ದೇಸಾ ವೈನ್ಸ್ ಖಾತೆಯಲ್ಲಿ ನಡೆದಿರುವ ವ್ಯವಹಾರದ ಸ್ಟೇಟ್ ಮೆಂಟ್ ಅನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನಾನು ಮುಂದೆ ಹಾಜರುಪಡಿಸುತ್ತೇನೆ.

ಆರೋಪಿಯ ಖಾತೆಯಿಂದ ನನ್ನ ಮಗನ ಮತ್ತು ನನ್ನ ವೈನ್ಸ್ ಸ್ಟೋರಿನ ಖಾತೆಗೆ ಏಕೆ ಹಣ ಬರುತ್ತಿದೆ ಎಂದು ನಾನು ವಿಚಾರ ಮಾಡಿರುವುದಿಲ್ಲ. ಆರೋಪಿಯ ಊರಾದ ನಂದಿಪುರ ಗ್ರಾಮದಲ್ಲಿ ಮದ್ಯ ಮಾರಾಟ ಮಾಡುವ ಸಂಬಂಧ ಮೌಖಿಕ ಹರಾಜಿನಲ್ಲಿ ಆರೋಪಿಯು ಒಪ್ಪಿಗೆ ಪಡೆದುಕೊಂಡಿದ್ದು, ಮದ್ಯವನ್ನು ನನ್ನ ಅಂಗಡಿಯಿಂದ ಪಡೆದುಕೊಂಡು ಹೋಗಿ ಅದಕ್ಕೆ ಸಂಬಂಧಪಟ್ಟ ಹಣವನ್ನು ನನ್ನ ಮಗನ ಖಾತೆಗೆ ಹಾಗೂ ವೈನ್ಸ್ ಸ್ಟೋರಿನ ಖಾತೆಗೆ ಹಾಕುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ.

ನಾನು ಆರೋಪಿಯಿಂದ 1 ಚೆಕ್ ಪಡೆದಿರುತ್ತೇನೆ. ಅದನ್ನು ಹೊರತು ಪಡಿಸಿ ಬೇರೆ ಚೆಕ್ ಪಡೆದಿರುವುದಿಲ್ಲ. ಆರೋಪಿಯು ನಮ್ಮ ಅಂಗಡಿಯಲ್ಲಿ ಮದ್ಯದ ವ್ಯವಹಾರ ಮಾಡುತ್ತಿದ್ದ ಕಾರಣ ಸದರಿ ವ್ಯವಹಾರದ ಭದ್ರತೆಗೆಂದು ನಾನು ಆರೋಪಿಯಿಂದ 4 ಖಾಲಿ ಚೆಕ್ ಗಳನ್ನು ಪಡೆದಿದ್ದೆ ಎಂದರೆ ಸರಿಯಲ್ಲ.

ನಾನು ದಿ:25.10.2023 ರಂದು ಆರೋಪಿಯು ನನ್ನಿಂದ ಪಣ ಪಡೆದಿದ್ದು, ಆದಾದ 7 ತಿಂಗಳ ನಂತರ ನಾನು ಮರುಪಾವತಿಸುವಂತೆ ಕೇಳಿರುತ್ತೇನೆ. ನಾನು ಆರೋಪಿಯ ಬಳಿ 2024 ರ 5 ನೇ ತಿಂಗಳಿನಲ್ಲಿ ಹಣ ಕೇಳಿರುತ್ತೇನೆ. ಚೆಕ್ ಅನ್ನು ದಿ:19.06.2024 ರಂದು ನಗಧೀಕಣಕ್ಕೆ ಚೆಕ್ ಸಲ್ಲಿಸಿರುತ್ತೇನೆ. ಆರೋಪಿಯು ಚೆಕ್ ಅನ್ನು ಭರ್ತಿ ಮಾಡಿ ಸಹಿ ಮಾಡಿ ದಿನಾಂಕವನ್ನು ನಮೂದು ಮಾಡಿ ನೀಡಿರುತ್ತಾರೆ. ಚೆಕ್ಕಿಗೆ 19.06.2024 ರ ದಿನಾಂಕವನ್ನು ನಮಾದು ಮಾಡಿ ನೀಡಿರುತ್ತಾರೆ. ಈ ವಿಚಾರಗಳನ್ನು ನಾನು ನನ್ನದೂರಿನಲ್ಲಿ ಹೇಳಿರುತ್ತೇನೆ. ದಿ:25.10.2023 ರ ನಂತರದ 7 ತಿಂಗಳು ಯಾವಾಗ ಬರುತ್ತದೆ ಎಂದರೆ ಸಾಕ್ಷಿಯು ಜುಲೈ ಬರುತ್ತದೆ ಎಂದು ನುಡಿಯುತ್ತಾರೆ. ಆದಾದ ನಂತರ ನಾನು ಹಣ ಕೇಳಿರುತ್ತೇನೆ. ನಾನು ಹಣ ಕೇಳಿದ ನಂತರ ಆರೋಪಿ ನನಗೆ ಚೆಕ್ ನೀಡಿರುತ್ತಾರೆ. ಆರೋಪಿ ನೀಡಿರುತ್ತಾನೆ ಎಂದು ಹೇಳುವ ಚೆಕ್ ಅನ್ನು ನಗಧೀಕರಣಕ್ಕೆ ಸಲ್ಲಿಸುವ ಮುಂಚೆ ನಾನು

ನನ್ನ ವೈನ್ ಸ್ಟೋರಿನ ಬ್ಯಾಂಕ್ ಖಾತೆಯನ್ನು ಪರಿಶೀಲನೆ ಮಾಡಿ ನಂತರದಲ್ಲಿ ಹಾಕಿರುತ್ತೇನೆ. ಅದೇ ರೀತಿ ಆರೋಪಿ ನೀಡಿರುತ್ತಾನೆ ಎಂದು ಹೇಳುವ ಚೆಕ್ ಅನ್ನು ನಗಧೀಕರಣಕ್ಕೆ ಸಲ್ಲಿಸುವ ಮುಂಚೆ ನನ್ನ ಮಗನ ಬಳಿ ವಿಚಾರಣೆ ಮಾಡಿ ಹಾಕಿರುವುದಿಲ್ಲ.

ನಗಧೀಕರಣಕ್ಕೆ ಚೆಕ್ ಸಲ್ಲಿಸುವ ಪೂರ್ವದಲ್ಲಿ ನನ್ನ ವೈನ್ ಸ್ಟೋರಿನ ಖಾತೆಗೆ ಎಷ್ಟು ಹಣ ಬಂದಿದೆ ಎಂದು ಪರಿಶೀಲನೆ ಮಾಡಿ ಹಾಕಿರುತ್ತೀರಾ ಅಥವಾ ಪೂರ್ತಿ ಹಣಕ್ಕೆ ಹಾಕಿರುತ್ತೀರಾ ಎಂದರೆ ನಾನು ಖಾತೆ ಪರಿಶೀಲನೆ ಮಾಡುತ್ತಿರುವುದಿಲ್ಲ. ಆರೋಪಿಯು ನನ್ನ ಅಂಗಡಿಯಲ್ಲಿ ವ್ಯವಹಾರ ಮಾಡುವ ಪೂರ್ವದಲ್ಲಿ ತಮ್ಮಟದಲ್ಲಿ ಗೇಟ್ ನಲ್ಲಿ ಇದ್ದ ವೈನ್ಸ್ ಸ್ಟೋರಿನಲ್ಲಿ ವ್ಯವಹಾರ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಆಗ ನಾನು ಆರೋಪಿಯನ್ನು ಕರೆದು ನನ್ನ ಅಂಗಡಿಯಿಂದಲೇ ಮದ್ಯ ಖರೀದಿ ಮಾಡುವಂತೆಯೂ ಹಾಗೂ ನಂತರದಲ್ಲಿ ನನ್ನ ಖಾತೆಗೆ ಹಣ ಹಾಕು ಎಂದು ಹೇಳಿದ್ದು, ಅದರಂತೆಯೇ ಆರೋಪಿಯು ನನ್ನ ಮಾತು ಕೇಳಿ ನನ್ನ ಅಂಗಡಿಯಲ್ಲಿ ವ್ಯವಹಾರ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ಆರೋಪಿಯ ಊರು ನನ್ನ ವೈನ್ ಸ್ಟೋರಿನ ವ್ಯಾಪ್ತಿಯಲ್ಲಿ ಬರುತ್ತದೆ ನನ್ನ ಅಂಗಡಿಯಲ್ಲಿ ವ್ಯವಹಾರ ಮಾಡದಿದ್ದರೆ ಪೊಲೀಸರಿಗೆ ಹೇಳಿ ನಿನ್ನನ್ನು ರೈಡ್ ಮಾಡಿಸುತ್ತೇನೆ ಎಂದು ಬೆದರಿಸಿ ನಾನು ಆರೋಪಿಯೊಂದಿಗೆ ವ್ಯವಹಾರ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ನಾನು ಆರೋಪಿಯೊಂದಿಗೆ ವ್ಯವಹಾರಕ್ಕೆಂದು ಭದ್ರತೆಗಾಗಿ ಪಡೆದಿದ್ದ 4 ಚೆಕ್ ಹಾಳೆಗಳಲ್ಲಿ ಒಂದು ಚೆಕ್ ಅನ್ನು ಈ ಕೇಸಿನಲ್ಲಿ ಹಾಕಿರುತ್ತೇನೆ ಎಂದರೆ ಸರಿಯಲ್ಲ.

ಆರೋಪಿಗೆ ನಾನು ನೀಡಿದ್ದ ಮದ್ಯದ ಬಾಬ್ತು ಆರೋಪಿಯು ಎಲ್ಲಾ ಹಣವನ್ನು ನನ್ನ ಮಗನ ಖಾತೆಗೆ ಹಾಗೂ ವೈನ್ ಸ್ಟೋರಿನ ಖಾತೆಗೆ ಜಮಾ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ 1 ರ ಚೆಕ್ ಹಾಳೆಯನ್ನು ನನಗೆ ನೀಡುವಾಗ ಅದರ ಹಿಂದಿನ / ಮುಂದಿನ ಸಂಖ್ಯೆಯ 3 ಚೆಕ್ ಹಾಳೆಗಳನ್ನು ಸಹಃ ನನಗೆ ನೀಡಿದ್ದರು ಎಂದರೆ ಸರಿಯಲ್ಲ. ಆರೋಪಿಯು ನನ್ನ ಅಂಗಡಿಯಲ್ಲಿ ವ್ಯವಹಾರ ಮಾಡುವುದನ್ನು ಬಿಟ್ಟ ದ್ವೇಷಕ್ಕೆ ನಾನು ಈ ಕೇಸು ದಾಖಲು ಮಾಡಿರುತ್ತೇನೆ ಹೊರತು ಆರೋಪಿ ನನ್ನಿಂದ ಯಾವುದೇ ಹಣ ಪಡೆದಿಲ್ಲ ಎಂದರೆ ಸರಿಯಲ್ಲ.

**Cc2867/2024. pw1**

ಆರೋಪಿಯು ಆತನ ಖಾತೆಯಿಂದ ನನ್ನ ವೈನ್ ಸ್ಟೋರಿನ ಖಾತೆಗೆ ಜಮಾ ಮಾಡಿರುವ ಹಣವನ್ನು ಹಿಂಪಡೆದುಕೊಳ್ಳಲು ಅರ್ಹನೆ ಎಂದರೆ ಸಾಕ್ಷಿಯು ನಾನು ಬ್ಯಾಂಕ್ ಖಾತೆ ನೋಡಿ ಹೇಳಬಹುದು ಎಂದು ನುಡಿಯುತ್ತಾರೆ. ನನ್ನ ಮತ್ತು ಆರೋಪಿಯ ನಡುವೆ ಯಾವುದೇ ನಗಧು ಹಣ ವ್ಯವಹಾರ ನಡೆದಿಲ್ಲ ಭದ್ರತೆಗೆಂದು ನೀಡಿದ್ದ ಚೆಕ್ ಅನ್ನು ದುರುಪಯೋಗ ಪಡಿಸಿಕೊಂಡು ಈ ಸುಳ್ಳು ಕೇಸು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ದಿಃ25.10.2023 ರಂದು ಆರೋಪಿ ಮತ್ತು ನನ್ನ ನಡುವೆ ಯಾವುದೇ ಹಣದ ವ್ಯವಹಾರ ನಡೆದಿರುವುದಿಲ್ಲ ಎಂದರೆ ಸರಿ. ಆರೋಪಿಗೆ ತೊಂದರೆ ಕೊಡಲು ಈ ಸುಳ್ಳು ಚೆಕ್ ಕೇಸು ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ- ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.